Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 46] ಬುಧವಾರ 26—11—47 [ಬಿಡಿ ಪ್ರತಿ 3 ಪೈ

ಇಂಡೋನೇಷಿಯಾಕ್ಕೆ ಸ್ವಾತಂತ್ರ್ಯವಿಲ್ಲ '

ಪತ್ರಿಕೆಗಳು

ನ್ಯಾಸುಪ್ರಿಂಟಿನ ಮೇಲಿಕಂಟ್ರೋಲು ತೊಲಗಿಸಿ ಪತ್ರಿಕಾ ಶಾಸನವನ್ನು ಸಡಲಿಸಿದ ಕೂಡಲೇ ಮದರಾಸು ಪ್ರಾಂತ್ಯದಲ್ಲಿಯೇ ಅನೇಕ ಪತ್ರಿಕೆಗಳು ಹೊಂಬಿದ್ದವು. ಮದರಾಸು ನಗರ ಒಂದರಲ್ಲಿಯೇ 1947 ನೇ ಮಾರ್ಚಿಯಿಂದ ಹೊಂಬಿದ್ದಿರುವ ಪತ್ರಿಕೆಗಳು ಹೀಗಿವೆ — ದಿನಪತ್ರಿಕೆಗಳು 7 ವಾರ ಪತ್ರಿಕೆಗಳು 67 ಮಾಸಪತ್ರಿಕೆಗಳು 136 ದ್ವೈವಾರಪತ್ರಿಕೆ 1 ಪಕ್ಷಪತ್ರಿಕೆ 1 ಅರ್ಧವರ್ಷಪತ್ರಿಕೆ 1, ಒಟ್ಟು 242 ಪತ್ರಿಕೆಗಳು ಹೊಂಟಿವೆ.

ಮುಷ್ಕರ ?

ಎರ್ನಾಕುಲಂ ನ 24.... ಕೊಚ್ಚಿಯ 3 ಸಾವಿರ ಮಂದಿ ಉಪಾಧ್ಯಾಯರು ತಮ್ಮ ಕೇಳಿಕೆಗಳನ್ನು ಸಂವೇರಿಸದಿದ್ದರೆ ಜನವರಿ 15 ರಿಂದ ಮುಷ್ಕರ ಹೂಡುವುದಾಗಿ ಬೆದರಿಸಿದ್ದಾರೆ.

ರದ್ದಾಯಿತು

ಅಗ್ರಾ ನ 23....ಇಲ್ಲಿಯ ಮುಸ್ಲಿಂ ಲೀಗು ರದ್ದುಪಡಿಸಲ್ಪಟ್ಟಿತು.

Save the Cow
ಗೋ ವಧೆ ನಿಲ್ಲಲಿ

Edited, Printed and Publishd by M S Krishna Rao at the Satyavadi Press Chamaraja Agahar Myrsore.

ಸ್ವಾತಂತ್ರ್ಯವಿಲ್ಲ '

ದಿ ಹಾಗ್ ನ 24.... ಇಂಡೋನೇಷಿಯಾಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡಲಾಗುವುದೆಂದೂ ಬಟಾವಿಯಾದಿಂದ ಡಚ್ ಸೈನ್ಯ ವಾಪಸ್ಸು ಕರೆಸಲಾಗುವುದಿಲ್ಲವೆಂದೂ ಹೇಳಲಾಗಿದೆ

ಬೆಂಗಳೂರು ನ 26 .... ಮೈಸೂರು ರಾಜ್ಯಾಂಗ ಸಭೆಗೆ ಜನವರಿಯಲ್ಲಿ ಚುನಾವಣೆ ನಡೆಯುವ ನಿರೀಕ್ಷಣೆ ಇಲ್ಲ

ಮೈಸೂರು.... ವಿದ್ಯಾರ್ಥಿ ಕಾಂಗ್ರೆಸ್ಸಿಗೆ ನೂತನವಾಗಿ ಸೇರುವ ಮೆಂಬರುಗಳಿಗೆ ತಾ॥ 29 ರ ಸಂಜೆವರೆಗೆ ಅವಧಿ ಹೆಚ್ಚಿಸಲಾಗಿದೆ.

ನವದೆಹಲಿ ನ 25....ಒಂದು ವರ್ಷ ಕಾಲ ಸ್ಟಾಂಡ್‌ಸ್ಟಿಲ್ ಒಪ್ಪಂದಕ್ಕೆ ಹೈದರಾಬಾದು ಒಪ್ಪಿದೆ. ಷರತ್ತುಗಳು ಶನಿವಾರ ಹೊರಬೀಳುತ್ತೆ

ಹಂಗಳೂರು.... ಬರುವ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ 20 ಸ್ಥಾನಗಳು ದೊರೆತಿವೆ. ಇನ್ನು 4 ಸ್ಥಾನಗಳು ಮಾತ್ರ ಸ್ಪರ್ಧೆಗಿದ

ಗುಂಟೂರು.... ಇಲ್ಲಿಯ ಕಾಲೇಜು ವಿದ್ಯಾರ್ಥಿಗಳು ನಿಕಟ್ ಮಾಡಿದರು. ಕಾಲೇಜು ಮುಚ್ಚಲ್ಪಟ್ಟು ಕೆಲ ವಿದ್ಯಾರ್ಥಿಗಳು ದಸ್ತಗಿರಿಮಾಡಲ್ಪಟ್ಟರು

ಕಾಂಗ್ರೆಸೇತರರು

ನವದೆಹಲಿ ನ 24— ಕಾಂಗ್ರೆಸೇತರ ಮಂತ್ರಿಗಳು ಕಾಂಗ್ರೆಸ್ ಅಸೆಂಬ್ಲಿ ಪಾರ್ಟಿಗೆ ಸೇರಿದರು

ರಾಜರು ಜಗ್ಗಿದರು

ಜಮ್ಮೂ ನ 24 — ಕಾಶ್ಮೀರದ ಆರು ಸರು ಪ್ರಜೆಗಳಿಗೆ ಪೂರ್ತಿ ಜಗ್ಗಿದಾರೆ ಪ್ರಜೆಗಳ ಸುಖಕ್ಕಾಗಿ ಅವಶ್ಯಬಿದ್ದರೆ ದೇಶವನ್ನು ಬಿಡಲೂ ಸಿದ್ಧರಂತೆ.

ದಸ್ತಗಿರಿ

ಹೈದರಾಬಾದ್ ನ 25.... ಹೈದರಾಬಾದಿನ 36 ಮಂದಿ ಹಳವಳ ಪ್ರಚಾರಕರು ಇಲ್ಲಿ ಒಂದಿಸಲ್ಪಟ್ಟಿದಾರೆ.

ಅಂಗಸಾನರ ಶವ

ರಂಗೂನ್ ನ 25 .... ಮಾನಿಮಾಡಲ್ಪಟ್ಟ ಮುಖ್ಯಮಂತ್ರಿ ಅಂಗಸಾನರ ದೇಹವು ಅನಿರ್ದಿಷ್ಟಕಾಲ ಗಾಜಿನ ಶವ ಪೆಟ್ಟಿಗೆಯಲ್ಲಿಡಲ್ಪಟ್ಟಿರುವುದಂತೆ.

ಧೂರ್ತತನ

ಕಲ್ಲೀಕೋಟೆ ನ 24.... ಮಾಹೆಯಲ್ಲಿ ಮುಸ್ಲಿಮರು ಏಕಾದಶೀ ಮೆಂಪಣಿ ಮೇಲೆ ಧಾಳಿ ನಡೆಸಿದರು. ಅನೇಕರು ಗಾಯಗೊಂಡರು.

ನಿರಾಶ್ರಿತರು

ಪಶ್ಚಿಮ ಪಂಜಾಬಿನಲ್ಲಿ ಇನ್ನೂ 447 ಸಾವಿರ ನಿರಾಶ್ರಿತರಿರುವರು.

ಪ್ರತಿಬಂಧಕ

ಬೆರೆಯಿಲ್ಲಿ ನ 23 .... ಪಾಕಿಸ್ತಾನ ರೇಡಿಯೋ ಪ್ರಾಣಿಯನ್ನು ಜನರು ಕೇಳುವುದನ್ನು ಡಿ॥ ಮ್ಯಾಜಿಸ್ಟ್ರೇಟರು ಪ್ರತಿಬಂಧಿಸಿದಾರೆ. ಗ್ರಾಮಗಳಲ್ಲಿನ ವಾಧದ ಸಂತೆಗಳಲ್ಲಿ ಗೋಮಾಂಸ ಮಾರಾಟ ಪ್ರತಿಬಂಧಿಸಿದಾರೆ

ಕೈಲಾಸಂ ಸ್ಮರಣೆ

ಸ್ವಂ. ನಂ 1 ಮೈಸೂರು ನ 26

ಶ್ರೀಮತ್ ತ್ಯಾಗರಾಜ ಪರಮಶಿವ ಕೈಲಾಸಂ ಕೈಲಾಸವಾಸಿಯಾಗಿ ನಿನ್ನೆಗೆ ವರ್ಷ ತುಂಬಿತು. ಆ ಸಾಹಿತ್ಯ ಸಾಮ್ರಾಟನ್ನ ನೆನೆಸಿಕೊಳ್ಳುವ ಸಲುವಾಗಿ ಇಲ್ಲಿನ ಇಂಟರ್ ಕಾಲೇಜು ಸಂಘದವರು ಒಂದು ಉಪನ್ಯಾಸ ಮತ್ತು ಸಾಹಿತ್ಯ ಪ್ರದರ್ಶನ ಸಭೆ ಏರ್ಪಡಿಸಿದ್ದರು. ಶ್ರೀ ಅಕ್ಕಿಹೆಬ್ಬಾಳು ಮೂರ್ತಿರಾಯರು ಅಗ್ರ ಪೀಠದಲ್ಲಿರಲಾಗಿ ಶ್ರೀ ಆನವಟ್ಟಿ ಕೃಷ್ಣರಾಯರು ಕೈಲಾಸಂ ಪ್ರತಿಭೆಬಗೆಗೆ ಒಂದು ಗಂಟೆ ಕಾಲ ನಿರರ್ಗಳ ಭಾಷಣ ಮಾಡಿದರು. ಅವರು ಹೇಳಿದ್ದಾದರೂ ಇಷ್ಟೆ, ನನ್ನು ನಾಟಕಕಾರರು ಬಹು ತೇಕ ನಾಟಕ ರಚಿಸುತ್ತೇನೆಂದು ಹೊರಟು ತಲೆ ಚಿಟ್ಟುಹಿಡಿಯುವ ಉಪನ್ಯಾಸಗಳನ್ನು ಬರೆದಿಟ್ಟು ಅದೇ ನಾಟಕವೆನ್ನು ತ್ತಾರೆ. ಆದರೆ ಕೈಲಾಸಂ ನಾಟಕಕಾರ ತಾನು ಉಪನ್ಯಾಸಕೊಟ್ಟರೆ ಜನ ಕೇಳೊಲ್ಲನೆಂದು ಅದನ್ನೇ ನಾಟಕವನ್ನಾಗಿ ಮನರಂಜಕ ದೃಶ್ಯಗಳ ಮುಪೇಣ ಮಂಡಿಸುತ್ತೇನೆಂದು ಹೊರಟು ಉಪನ್ಯಾಸಪೆಟ್ಟು ನಿಶ್ಚಯಕಕ್ಕೆ ನಾಟಕವನ್ನೇ ನಾಡಿಗೆ ನೀಡಿದ. ಜೋಲು ಮೋವೆಗಳ ನವ್ಮ ಜನಕ್ಕೆ ನಗೆ ತಂದು ನಿಲ್ಲಿಸಲೆತ್ನಿಸಿದ ಆ ಭೂಪ. ಅತ ನೋಡಲು ಹೇಗೋ ಕಂಡುಬಂದೆರೂ ಹೃದಯಾಂತರಾಳದಲ್ಲಿ ಮಹಾಮಹಿಮ. ಉತ್ತಮ ಸನ್ನಿವೇಶದಲ್ಲಿದ್ದಾಗ ಅತ್ಯುತ್ತಮ ಏಕಲವ್ಯ ನಾಟಕವನ್ನು ರಚಿಸಿ ನಾಡಿನ ಜನ ಗಂಡುಗಲಿಗಳಾಗಬೇಕೆಂಬ ಸಂದೇಶ ಬೀರಿದರು. ಆದರೆ ' ಕರ್ಣ ನಾಟಕೆ ರಚಿಸಿ ಕೈಲಾಸಂ ಸೋತಿದ್ದಾರೆ. ಅದನ್ನು ರಚಿಸುವ ಹೆರುಯುತ್ತಿಹೇಗಿತ್ತೋ; ಅಂತೂ ಅದರಲ್ಲಿ ಗಂಡು ಆದರ್ಶ ಎದ್ದುಬಂದಿಲ್ಲ. ಒಟ್ಟನಲ್ಲಿ ಕನ್ನಡಿಗರಿಗೆ ಹಾಸ್ಯದಾತ, ಸನ್ಯಾಸಿಗೆ ನಾಟಕವೆಂಬ ಕೈಗನ್ನಡಿ ಕೊಟ್ಟ ಕನ್ನಡ ವೀರ, ಎಂದರು.

ಶ್ರೀ ಮೂರ್ತಿರಾಯರು ಕೈಲಾಸಂ ಕಲಾರಂಗ ಸ್ಥಾಪನೆಗೆ ಸಹಕಾರ ಬೇಡಿದ್ದಕ್ಕೆ ಎಲ್ಲರ ಸಹಾಯ ಆಗತ್ಯವೆಂದು ಸಭಿಕರಲ್ಲಿ ಒಪ್ಪಿಸಿಕೊಂಡರು. ಸಂತರ ಕೈಂವರ ಪಾತುರ್ಮನೆ ನಾಟಕದ ಸ್ವಯೋಗವನ್ನು ಸಂಘದವರು ಸಡೆಸಿದರು

ರಾವಣ್ಣ–ಲಕ್ಷ್ಮಿದೇವಮ್ಮ ಜೋಡಿ ಸರಿಯಾಗಿ ಕೂಡಿತ್ತು. ಶ್ರೀ ಎ. ಕೆ ಮತ್ತು ಕೆ. ಜಿ. ಸತ್ಯನಾರಾಯಣರು ಆ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಪ್ರಭಾಮಣಿ, ಮೀ ಮುಖದ ಸುಪ್ರದೀಪವಾಗಿದ್ದರೂ 'ಪಂಪ್ವಟೀ ಅಮ್ಮನವರೇ' ಎಂಬ ಕ್ಲಿಷ್ಟ ಯಿ ಉಚ್ಚರಣೆ ಸಲೀಸಾಗಿ ಶೋಭಿಸಲಿಲ್ಲ. ಬೋರ ಕಟ್ಟುಮಸ್ತಾಗಿದ್ದನೆ ಹೊರತು, ಸಂಸಿ ಸಹೃದಯನಾಗಿ ಸಂಭಾಷಿಸಲಿಲ್ಲ. ಯಾಕೂಬ್‌ಗೆ ಅಲಂಕಾರ ವಿಪರೀತವಾಗಿಹೋಗಿತ್ತು. ಕೃತಿಯಲ್ಲಿಲ್ಲದ ವಾಕ್ಯಗಳು ಬಾಯಿಂದ ಹೊರಡುತ್ತಿದ್ದವು. ಸಂಸಿಂಹಯ್ಯನವರು ಪ್ರವಾಸ ಪ್ರಯಾಸವಿದ್ದರೂ ಸ್ವಲ್ಪ ಹೆಚ್ಚಾಗಿ ಕಿರಚಿದ್ದು ಮತ್ತಷ್ಟು ಶ್ರಮ ಹೆಚ್ಚಿಸಿರಬೇಕು. ಶ್ರೀನಿವಾಸಶಾಸ್ತ್ರಿಗಳು ಪಾತ್ರದ ಔಚಿತ್ಯಕ್ಕೆ ಬಳುಕನ್ನು ತೋರಿದರೂ ಅಷ್ಟೇ ಠೀವಿಯ ಮಾತಾಡದೆ ಹೋದುದು ಸಂಕಟಕರ. ನಾಗತ್ತೇಗೆ 18 ವರ್ಷದ ಹುಡುಗೀ ಹಾಗೆ ಅಚ್ಚುಕಟ್ಟಿನ ಹಲ್ಲಿನ ಸಾಲಿತ್ತು. ಒಳ್ಳೆ ಬಣ್ಣದ ವೈಕಟ್ಟಿತ್ತು. ಆದರೆ ತಲೆಗೆ ಮಾತ್ರ ಮುಸುಕೆಳೆದು ಎಳೆಪ್ರಾಯದ ಧ್ವನಿಯಲ್ಲಿ ವಯಸ್ಸಾದ ವೇದಾಂತ ಮಾತುಗಳು ಸ್ಪುಟವಾಗಿ ಸ್ಪಷ್ಟವಾಗಿ ಬಿಡಿಸಿ ಬಿಡಿಸಿ ಬರುತ್ತಿದ್ದವು. ರಂಗನಾಥರು ಕಿಟ್ಟಿ ಪಾತ್ರಕ್ಕೆ ತಕ್ಕ ರೀತಿ ಉಡುಗೆ ತೊಟ್ಟು, ನಡಿಗೆ ಇಟ್ಟು, ಬುದ್ಧಿವಂತಿಗೆ ಬಿಟ್ಟು, ದಡ್ಡತನ ಪ್ರದರ್ಶಿಸಿ ಪಾತ್ರ ನಿರ್ವಹಿಸಿದರಾದರೂ ಸ್ವಲ್ಪ ಇತಿಮಿತಿ ಕಡೆ ಗಮನ ಕೊಟ್ಟಿದ್ದರೆ ಅದ್ಭುತವಾಗುತ್ತಿತ್ತು. ಇನ್ನು ಪೋಸ್ಟ್ ಮ್ಯಾಸ್ಟರ್. ಅವನಲ್ಲಿ ಅಂಚೆ ಹೊತ್ತು ಹಂಚಿದ ದುಡುಮೆ ಸುಸ್ತು ಕಾಣುತ್ತಿರಲಿಲ್ಲ. ಸಂಸಿಂಹಯ್ಯನೊಂದಿಗೆ ವಾಜ್ಯವಾಡಲೇ ನೇರವಾಗಿ ಅಲ್ಲಿಗೆ ಬಂದುತಿತ್ತು. ದಿಗ್ದರ್ಶನ, ಪ್ರವೇಶ, ನಿರ್ಗಮನ, ನಿಂತುಮಾತಾಡಬೇಕೆ ಎಂಬ ಪೂರ್ವಾಪರ ವಿವೇಚನಾ ಶಕ್ತಿ ನಗದ ಪೆಟ್ಟಿಗೆ ಬಿಟ್ಟಲ್ಲೇ ಬಡಬಹುದೇ ಎಂಬ ದೃಶ್ಯ ಸಂಯೋಜನಾ ಜ್ಞಾನ ಕ್ಷಣಮಾತ್ರವೂ ಕಾಣುತ್ತಿರಲಿಲ್ಲ. ಒಟ್ಟನಲ್ಲಿ ಪ್ರಯೋಗ ಪ್ರಯೋಗವಾಗದೇ ಇದ್ದುದು ಒಂದು ವಿಶೇಷ.

ವಂದೇಮಾತರಂ ಒಂದಿಗೆ ಸಮಾರಂಭ ಕೊನೆಗೊಂಡಿತು

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀವನ

Woodlands

ಯಶಸ್ವಿ 4 ನೇ ವಾರ

ಅಶೋಕಕುಮಾರ್

ವೀರಾ, ಪ್ಯಾರೊ, ಪಾತ್ರವಹಿಸಿರುವ

ಪಿ

ಪಿಕಾರಿ

ರಿ

(ಅವೋಫ಼ ಹಿಂದಿ ಚಿತ್ರ)

At Opera From 20–11–47

ಮಾಲಿತಿ — ಶಿವಭಾಗ್ಯಂ

ಎಸ್. ವಿ. ಸುಬ್ಬಯ್ಯ — ಸಂಬಿಯಾರ್

ಪಾತ್ರವಹಿಸಿರುವ

ಕಂಜನ್

ತಮಿಳು ಚಿತ್ರ — ಇದರ ಜೊತೆಯಲ್ಲಿ ಕೊಯಮತ್ತೂರಿನಲ್ಲಿ ಸ್ವತಂತ್ರ ದಿನಾಚರಣೆ ಮತ್ತು ಮಹಾತ್ಮಾ ಗಾಂಧಿಯ ವರಸಳನಿ ಯಾತ್ರೆ ಫಿಲಿಂ ಸಹಾ ತೋರಿಸಲಾಗುತ್ತೆ.

SHAKTI SUDHA

A Superb TONIC

ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪಂಸ್ಥಳಕ್ಕೆ

ಅಂಚವೆಚ್ಚ ಸೇರಿ ರೂ. 9.

ಸೋಮವಾರಪಂಚಿಕೆ ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1–12–0

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯು [illegible] ದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು